**<u>ದಿನಾಂಕ 22-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ-</u>**

7. ಪ್ರತಿವಾದಿ ನನಗೆ 8-9 ವರ್ಷಗಳಿಂದ ಪರಿಚಯ. ಪ್ರತಿವಾದಿಯ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿ ಯಾವ ಕ್ಯಾಂಪಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಆತ ಬಾಲಾಜಿ ಕ್ಯಾಂಪಿನಲ್ಲಿ ನನಗೆ ಪರಿಚಯವಾದಾಗಿನಿಂದಲೂ ಅಲ್ಲಿಯೇ ವಾಸವಿದ್ದಾರೆ ಎನ್ನುತ್ತಾರೆ. ಎಷ್ಟು ವರ್ಷಗಳಿಂದ ಆತ ಅಲ್ಲಿ ವಾಸವಾಗಿದ್ದಾನೆ ಎಂದರೆ ಸಾಕ್ಷಿಯು ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ, ಆದರೆ ನನಗೆ ಪರಿಚಯವಾದಾಗಿನಿಂದಲೂ ಅಲ್ಲಿಯೇ ಇದ್ದಾನೆ ಎನ್ನುತ್ತಾರೆ.

8. ಪ್ರತಿವಾಗಿ ನಿಮ್ಮ ತಮ್ಮನಿಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ 2020 ರ ಫೆಬ್ರವರಿ 1 ಅಥವಾ 2 ನೇ ತಾರೀಖಿನಂದು ಬಂದು ಭೇಟಿಯಾಗಿದ್ದ. ಆತ ಒಬ್ಬನೇ ವಾದಿಯನ್ನು ಭೇಟಿಯಾಗಲು ಬಂದಿದ್ದ. ನನ್ನ ತಮ್ಮ 2020 ರಲ್ಲಿ ಒಂದು ವಾರ-10 ದಿನಗಳ ವರೆಗೆ ಇದ್ದ. ನನ್ನ ತಮ್ಮ ಪ್ರತಿವಾದಿಗೆ ದುಡ್ಡು ಕೊಟ್ಟು ನಂತರ ಚೆನ್ನೈಗೆ ಕೆಲಸಕ್ಕೆಂದು ಹೋಗಿದ್ದನು. ಪ್ರತಿವಾದಿ ತನ್ನ ವ್ಯವಸಾಯದ ಖರ್ಚಿಗೆ ಹಣ ಬೇಕೆಂದು ವಾದಿಯನ್ನು ಕೇಳಿದ್ದನು, ಆಗ ನನ್ನನ್ನೂ ಸಹ ಕರೆದು ಕೂರಿಸಿದ್ದನು. ಆತ ಹಣ ಕೇಳಿದಾಗ ನಮ್ಮನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ.

9. ಪ್ರತಿವಾದಿ 4-5 ಲಕ್ಷ ಹಣ ಬೇಕೆಂದು ಕೇಳಿದ್ದ. ಸಾಮಾನ್ಯವಾಗಿ ರೂ.4-5 ಲಕ್ಷ ಹಣ ಕೊಡುವುದಾದರೆ ಆಸ್ತಿಯನ್ನು ಒತ್ತೆ ಹಾಕಿಕೊಂಡು ಹಣ ಕೊಡುತ್ತಾರೆ ಎಂದರೆ ಸರಿಯಲ್ಲ. ಆತ ಹಣ ಕೇಳಿದ 2 ದಿನಗಳ ನಂತರ ನಾವು ಹಣ ಕೊಟ್ಟಿದ್ದೆವು. ಆ ಕಾಲಕ್ಕೆ ಪ್ರತಿವಾದಿ ಎ.ರಮೇಶ್ & ಚೌದ್ರಿರವರನ್ನು ಸಾಕ್ಷಿದಾರರನ್ನಾಗಿ ಕರೆದುಕೊಂಡು ಬಂದಿದ್ದರು. ಸದರಿ ಸಾಕ್ಷಿದಾರರು ನಮ್ಮ ಕ್ಯಾಂಪಿನವರೆ.

10. ಸಾಕ್ಷಿದಾರರು ನಿಮ್ಮ ಸಂಬಂಧಿಕರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿದಾರರ ಸಂಪೂರ್ಣ ಹೆಸರು & ವಿಳಾಸ ಬರೆದಿಲ್ಲ ಎಂದರೆ ಸಾಕ್ಷಿಯು ಬರೆದಿರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ, ಇದರಲ್ಲಿ ಆ ರೀತಿ ಬರೆದಿಲ್ಲ ಎಂದರೆ ಸಾಕ್ಷಿಯು ನಾನು ಅವರ ಹೆಸರು ಬರೆದಿರುತ್ತಾರೋ ಇಲ್ಲವೋ ಎಂದು ಹೇಳಿಲ್ಲ, ಆದರೆ ಅವರ ಹೆಸರು ಇದೆ ಎನ್ನುತ್ತಾರೆ. ಅಂದರೆ ಅವರ ಹೆಸರು ಎಲ್ಲಿದೆ ತೋರಿಸಿ ಎಂದರೆ ಸಾಕ್ಷಿಯು ಸಾಕ್ಷಿದಾರರ ಹೆಸರುಗಳುಳ್ಳ 1 & 2 ರಲ್ಲಿರುವ ಸಹಿಗಳನ್ನು ನೋಡಿ, ಎ. ರಮೇಶ್ & ಚೌದ್ರಿ ಎಂದು ಬರೆದಿರುತ್ತಾರೆ, ಇದು ಏನು, ಹೆಸರು ಎನ್ನುತ್ತಾರೆ & ಸಹಿ ಕೂಡ ಅನ್ನುತ್ತಾರೆ ಎನ್ನುತ್ತಾರೆ. ಅವರ ಸಹಿ ಮಾಡುವುದನ್ನು ನೀವು

ನೋಡಿರುತ್ತೀರಾ ಎಂದರೆ ಸಾಕ್ಷಿಯು ಅವಶ್ಯಕತೆ ಬಿದ್ದರೆ ನೋಡುತ್ತೇನೆ ಎನ್ನುತ್ತಾರೆ. ಇಬ್ಬರೂ ಸಾಕ್ಷಿದಾರರು ಬೇರೆ ಕಡೆ ಸಹಿಮಾಡಿರುವುದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿದ್ದೇನೆ ಎನ್ನುತ್ತಾರೆ. ಎಲ್ಲಿ ನೋಡಿದ್ದಿರಿ ಎಂದರೆ ಸಾಕ್ಷಿಯು ಅವರು ಹೊಲಕ್ಕೆ ಸಹಿ ಮಾಡುವಾಗ ನೋಡಿದ್ದೆ ಎನ್ನುತ್ತಾರೆ. ಸದರಿ ದಾಖಲೆ ಯಾವುದು ಎಂದರೆ ಸಾಕ್ಷಿಯು ಎಲ್ಲವೂ ಹೇಗೆ ನೆನಪಿರುತ್ತದೆ ಎನ್ನುತ್ತಾರೆ. ಎಷ್ಟು ವರ್ಷಗಳ ಹಿಂದೆ ಅವರು ಸಹಿ ಮಾಡಿದ್ದನ್ನು ನೋಡಿದ್ದೀರಿ ಎಂದರೆ ಸಾಕ್ಷಿಯು 5-6 ವರ್ಷಗಳ ಹಿಂದೆ ನೋಡಿರಬಹುದು ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**